# ಆಹಾ ಸುದ್ದಿ!

★ ಸಸಿತೋಟ



ಚೀನಾದ ಈ ವ್ಯಕ್ತಿ ಕಾಂಗ್ ಯಾನ್ ನಿತ್ಯ ತಲೆಯ ಮೇಲೆ 40 ಕೆಜಿ ತೂಕದ ಸಿಮೆಂಟ್ ಬ್ಲಾಕ್ ಹೊತ್ತು ತಿರುಗುತ್ತಾನಂತೆ. 115 ಕೆಜಿ ತೂಕವಿದ್ದ ಯಾನ್‌ನ 30 ಕೆಜಿ ತೂಕ ಮೈನಸ್ ಮಾಡಿದ್ದು ಇದೇ ಸಿಮೆಂಟ್ ಬ್ಲಾಕ್. ಹಾಗಾದರೆ ಕಟ್ಟಡ ಕೆಲಸಗಾರರ ತೂಕ ಎಷ್ಟು ಇಳಿಯಬೇಕಿತ್ತು?

ಚೀನಾದಲ್ಲಿ ಮಹಿಳೆಯರು ವಾಹನ ಪಾರ್ಕ್ ಮಾಡಲು ಶೇ. 50ರಷ್ಟು ಹೆಚ್ಚು ವಿಸ್ತಾರವಾದ ಸ್ಥಳ ಮೀಸಲಿಟ್ಟಿದ್ದಾರಂತೆ. ಅಂದರೆ ಸರಿಯಾಗಿ ಪಾರ್ಕ್ ಮಾಡಲು ಮಹಿಳೆಯರಿಗೆ ಬರುವುದಿಲ್ಲ ಎಂದು ಸಮೀಕ್ಷೆ ಹೇಳಿದೆಯಂತೆ. ಹಾಗೇ ಹೆದ್ದಾರಿಯಲ್ಲಿ ಅಪಘಾತ ಮಾಡುವ ಪುರುಷರ ಪ್ರಮಾಣ ಮೂರರಷ್ಟು ಜಾಸ್ತಿಯಾಗಿದೆಯಂತೆ. ಅದಕ್ಕೂ ಕಾರಣ ಮಹಿಳಾ ಚಾಲಕರಾ? ಸಮೀಕ್ಷೆಯ ಮುಂದಿನ ಕಂತಿಗಾಗಿ ಕಾಯಬೇಕಾಗಬಹುದು.

ಕೆಎಫ್‌ಸಿಯಲ್ಲಿ ಕೂತು ಸ್ನೇಹಿತೆಗೋ, ಗೆಳೆಯನಿಗೋ ಸ್ಮಾರ್ಟ್‌ಫೋನ್‌ನಲ್ಲಿ ಸಂದೇಶ ಕಳಿಸುವಾಗ ಬ್ಯಾಟರಿ ಕೈಕೊಟ್ಟರೆ... ಹೆದರಬೇಡಿ, ನಿಮ್ಮ ನೆರವಿಗೆ ಕೆಎಫ್‌ಸಿ ಬರುತ್ತದೆ. ನೀವು ಬೇಡಿಕೆ ಸಲ್ಲಿಸಿದ ಚಿಕನ್ ಬಾಕ್ಸ್ ಜೊತೆ ಮೊದಲೇ ಚಾರ್ಜ್ ಮಾಡಿರುವ ಯುಎಸ್‌ಬಿ ಪ್ಲಗ್ ನಿಮ್ಮ ಟೇಬಲ್‌ಗೆ ಬಂದು ಕೂರುತ್ತದೆ. ಬಿಸಿ ಬಿಸಿ ಚಿಕನ್ ತಿನಿಸು ತಿನ್ನುವುದಕ್ಕಿಂತ ಮುನ್ನ ಫೋನಿನಲ್ಲಿ ಬಿಸಿಯಾದ ಪಿಸು ಮಾತು ಮುಖ್ಯವಲ್ಲವೇ!





ಅಮೆರಿಕಾದ ವರ್ಜಿನಿಯದಲ್ಲಿ ವ್ಯಕ್ತಿಯೊಬ್ಬ ಮಗನ ಹುಳುಕು ಹಲ್ಲನ್ನು ಕೀಳಲು ಹೆಲಿಕಾಪ್ಟರ್ ಬಳಸಿ ಸಾಧನೆ ಮಾಡಿದ್ದಾನಂತೆ. ದಾರದ ಒಂದು ತುದಿಯನ್ನು ಮಗನ ಹಲ್ಲಿಗೆ ಕಟ್ಟಿ, ಇನ್ನೊಂದು ತುದಿಯನ್ನು ಹೆಲಿಕಾಪ್ಟರ್‌ಗೆ ಬಿಗಿದು ಟೇಕಾಫ್ ಮಾಡಿದಾಗ ಹಲ್ಲು ಸುಲಭವಾಗಿ ಬೇರು ಸಮೇತ ಕಿತ್ತು ಬಂತಂತೆ. ಹುಳುಕು ಹಲ್ಲು ಸಮಸ್ಯೆಯೇ? ಹೆಲಿಕಾಪ್ಟರ್ ಬಳಸಿ ಎಂದು ಹೊಸ ಸ್ಲೋಗನ್ ಹುಟ್ಟುಹಾಕಬಹುದು.





ಜಪಾನಿನಲ್ಲಿ ಹೊಸ ಕ್ರೇಜ್ ಶುರುವಾಗಿದೆ. ಕನಿಷ್ಠ ಎಂದರೆ ಶ್ರೇಷ್ಠ ಎನ್ನುವ ಗುಂಪು ಶುರುವಾಗಿದ್ದು, ಅತ್ಯಂತ ಕಡಿಮೆ ಗೃಹೋಪಯೋಗಿ ಸಲಕರಣೆಗಳನ್ನು ಬಳಸುತ್ತಾರಂತೆ. ಗಂಡನೆಂಬ ಸಾಂಪ್ರದಾಯಕ ಗ್ಯಾಜೆಟ್ ಮುಂದೆ ಬೇರೆ ಅತ್ಯಾಧುನಿಕ ಗ್ಯಾಜೆಟ್‌ಗಳನ್ನೆಲ್ಲ ಮೂಲೆಗೆ ಎಸೆಯಬಹುದು ಎಂದು ತೋರಿಸಿಕೊಟ್ಟಿದ್ದಾಳೆ ಈ ಮಹಿಳೆ.

ದಕ್ಷಿಣ ಆಫ್ರಿಕಾದ ವಿವಿಯೊಂದರಲ್ಲಿ ಕನ್ಯತ್ವ ಉಳಿಸಿಕೊಂಡ ಯುವತಿಯರಿಗೆ ಮಾತ್ರ ವಿದ್ಯಾರ್ಥಿವೇತನ ನೀಡುವುದಾಗಿ ಘೋಷಣೆ ಮಾಡಲಾಗಿದ್ದು, ವಿವಾದ ಇನ್ನಷ್ಟು ತೀವ್ರವಾಗಿದೆಯಂತೆ. ವಿವಿ ಪ್ರವೇಶಕ್ಕೆ ಈಗಾಗಲೇ ಫಿಟ್ನೆಸ್ ಸರ್ಟಿಫಿಕೇಟ್ ನೀಡಿ ರುಚಿ ಕಂಡಿರುವ ವೈದ್ಯರು, ಏಜೆಂಟರು ಕೋರ್ಟ್ ತಡೆಯಾಜ್ಞೆ ನೀಡಿಬಿಟ್ಟರೆ ಎಂದು ತಮ್ಮ ತಮ್ಮ ಪರ್ಸ್ ಮುಟ್ಟಿ ನೋಡಿಕೊಳ್ಳುತ್ತಿರಬಹುದು.